ಶ್ರೀ ಎಂ. ಪಿ. ಪ್ರಕಾಶ್.--ಈಗಾಗಲೇ ವಾಣಿಜ್ಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳ ಮೂಲಕ ಸಾಲ ಕೊಡತಕ್ಕ ವಿಷ್ಯಾಡು ಮಾಡಿದ್ದೇವೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂದು ಜಿಗಿ ಹಂಳುವಿನ ರೋಗ ಕಾಣಿಸಿಕೊಂಡಿತ್ತು. ಆದು ಕಾಣಿಸಿಕೊಂಡ ಪ್ರದೇಶದ ಶಾಸಕರನ್ನು ಕರೆದು ಅವರುಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆದಿದ್ದೆವು. ಈಗಾಗಲೇ ಬ್ಯಾಂಕುಗಳ ಮೂಲಕ ಸಾಲಗಳು ಮಂಜೂರಾಗಿದ್ದು, ಇನ್ನು ಸೇವಾ ಸಹಕಾರ ಸಂಘಗಳ ಮೂಲಕ ಆಗುವುದರ ಬಗ್ಗೆ ಸ್ವಲ್ಪ ತಡವಾಗಿದೆ. ಈ ಬಗ್ಗೆ ಇನ್ನು ೧೦-೧೫ ದಿವಸಗಳಲ್ಲಿ ಕಾರ್ಯಕ್ರಮ ಹಾಕಂತ್ತೇವೆಂದು ಮತ್ತೊಮ್ಮೆ ಹೇಳುತ್ತೇನೆ.

ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು.

೧೧೭೯. ಶ್ರೀ ಡಿ. ಎ. ಚಿನ್ನಪ್ಪ (ಮಾಡಕೇರಿ) ಹಾಗೂ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.--

ಅ) ಸರ್ಕಾರಿ ಆದೇಶದ ಸಂಖ್ಯೆ ಇ.ಡಿ. ೧೧೯ ಪಿ.ಪಿ.ಯು ೭೩, ದಿನಾಂಕ ೨೮-೮-೧೯೭೪ರ ಪ್ರಕಾರ ಕರ್ನಾಟಕ ರಾಜ್ಯದ ವಿವಿಧ ಪ್ರೌಢಶಾಲೆಗಳಲ್ಲಿ ಸೇವೆಸಲ್ಲಿಸುತ್ತಿರುವ ಸ್ನಾತಕೋತ್ತರ ಪದವಿ ಪಡೆದಿರುವ ಪ್ರೌಢಶಾಲಾ ಸಹಾಯಕ ಶಿಕ್ಷಕರಿಗೆ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಲ್ಲಿ ಶೇಕಡ ೫೦ರಷ್ಟು ಹುದ್ದೆಗಳನ್ನು ಮೀಸಲಿಟ್ಟಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಇದರ ಪ್ರಕಾರ ಎಷ್ಟು ಶಿಕ್ಷಕರಿಗೆ ಕಿರಿಯ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಬಡ್ತಿ ನೀಡಲಾಗಿದೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).--

ಅ) ಹೌದು. ತರುವಾಯ ಸರ್ಕಾರದ ಆಜ್ಞೆಯನ್ನು ರದ್ದುಪಡಿಸಿ ಉಪಬಂಧವನ್ನು ಉಳಿಸಿಕೊಂಡು ದರ್ಜೆ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಿದೆ.

ಆ) ಇಲ್ಲಿ.

ಶ್ರೀ ಡಿ. ಎ. ಚಿನ್ನಪ್ಪ.--ಅಧ್ಯಕ್ಷರೇ, ೧೯೮೪ರಲ್ಲಿ ಕೆಲವು ಶಿಕ್ಷಕರ ೫ ವರ್ಷಗಳ ಗುಪ್ತವರದಿಯನ್ನು ತರಿಸಿಕೊಂಡಿದ್ದಾರೆ. ಎಂದು ತಿಳಿದು ಬಂದಿದೆ ಅದು ಏನೆಂದು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀ ಎಂ. ರಘುಪತಿ.--ಅದು ಗುಪ್ತ ವರದಿಯಾದ ಮೇಲೆ ಅದನ್ನು ಸಭೆಯ ಮುಂದಿಡುವುದ ಕ್ಕಾಗುವುದಿಲ್ಲ.

ಕಾಲೇಜು ಉಪನ್ಯಾಸಕರುಗಳಿಗೆ ಕಾಲಮಿತಿ ಬಡ್ತಿ.

೧೨೦೭. ಶ್ರೀ ಚಂದ್ರಶೇಖರ್ (ಗೌರಿಬಿದನೂರು).--ಮಾನ್ಯ ಶಿಕ್ಷಣ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಕಾಲೇಜು ಅಧ್ಯಾಪಕರ ಕಾಲಮಿತಿ ಬಡ್ತಿಯ ಬಗ್ಗೆ ಸರ್ಕಾರಿ ಆಜ್ಞೆ ಹೊರಬಿದ್ದಿದೆಯೇ?

ಆ) ಆ ಆಜ್ಞೆಯಲ್ಲಿ ಪಾಸ್ ಕ್ಲಾಸ್ ಅಧ್ಯಾಪಕರ ಬಡ್ತಿಯ ಬಗ್ಗೆಯೂ ಸೇರಿಸಲ್ಪಟ್ಟಿದೆಯೇ?

ಇ) ಪಾಸ್ ಕ್ಲಾಸ್ ಅಧ್ಯಾಪಕರಿಗೆ ಅವರ ಸೇವಾವಧಿಯಲ್ಲಿ ಒಂದು ಬಡ್ತಿಗೆ ಅರ್ಹರಾಗುತ್ತಾರೆಂಬ ಸಚಿವ ಸಂಪುಟದ ನಿರ್ಧಾರವಾದ ಮೇಲೂ ಸರ್ಕಾರಿ ಆಜ್ಞೆಯಾಗುವುದಕ್ಕೆ ಇಷ್ಟು ವಿಳಂಬವೇಕೆ

ಈ) ಸರ್ಕಾರಿ ಆಜ್ಞೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವವರಿಗೆ ೧೦ ವರ್ಷದ ನಂತರ ಬಡ್ತಿ ಹಾಗೂ ಇತರರಿಗೆ ೧೫ ವರ್ಷದ ನಂತರ ಬಡ್ತಿ ಎಂದು ನಮೂದಿಸಲಾಗಿತ್ತೆ ಎಂಬುದು ನಿಜವೇ? ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಯವರು).--

ಅ) ಯೂನಿವರ್ಸಿಟಿ ಕಾಲೇಜ್ ಟೀಚರ್ಸ್ ಅಸೋಸಿಯೇಷನ್ ಮತ್ತು ಕಾಲೇಜ್ ಟೀಚರ್ಸ್ ಅಸೋಸಿಯೇಷನ್‌ಗಳ ಮನವಿ ಪತ್ರದ ಮೇರೆಗೆ ಸರ್ಕಾರವು ಕೆಳಗಿನ ನಿಂದಭಸೆಗೊಳಪಟ್ಟು ಉಪನ್ಯಾಸಕರಿಗೆ ರೀಡರ್‌ಗಳಾಗಿ ಕಾಲಮಿತಿ ಬಡ್ತಿ ಕೊಡಲು ತೀರ್ಮಾನಿಸಿತ್ತು.

ಅ) "ಪಿ.ಎಚ್.ಡಿ. ಹೊಂದಿರುವ ಉಪನ್ಯಾಸಕರು ೧೨ ವರ್ಷ ಸೇವೆಯನ್ನು, ಪಿ.ಎಚ್.ಡಿ. ಇಲ್ಲದ ಉಪನ್ಯಾಸಕರು ೧೮ ವರ್ಷ ಸೇವೆಯನ್ನು ಸಲ್ಲಿಸಿರಬೇಕು." ಮೇಲ್ಕಂಡ ಅಸೋಸಿಯೇಷನ್‌ಗಳು ಪಿಎಚ್‌ಡಿ ಇಲ್ಲದ ಉಪನ್ಯಾಸಕರ ಸೇವಾ ಅವಧಿಯನ್ನು ೧೮ ವರ್ಷದಿಂದ ೧೫ ವರ್ಷಕ್ಕೆ ಇಳಿಸುವಂತೆ ಮತ್ತು ಅವರು ಡೆಮಾನ್‌ಸ್ಟ್ರೇಟರ್-ಟ್ಯೂಟರ್‌ಗಳಾಗಿ ಸಲ್ಲಿಸಿದ ಸೇವೆಯನ್ನು ಕಾಲಮಿತಿ ಬಡ್ತಿ ಕೊಡಲು ಪರಿಗಣಿಸುವಂತೆ ಪುನಃ ಸರ್ಕಾರಕ್ಕೆ ಮನವಿ ಮಾಡಿಕೊಂಡವು.

ಇ) ಸರ್ಕಾರವು ಜಾಗರೂಕ ಪರಿಶೀಲನೆಯ ನಂತರ ಸೇವಾ ಅವಧಿಯನ್ನು ೧೮ ವರ್ಷದಿಂದ ೧೫ ವರ್ಷಕ್ಕೆ ಇಳಿಸುವ ಮತ್ತು ಅವರು ಡೆಮಾನ್‌ಸ್ಟ್ರೇಟರ್-ಟ್ಯೂಟರ್‌ಗಳಾಗಿ ಸಲ್ಲಿಸಿದ ಸೇವೆಯನ್ನು ಕಾಲಮಿತಿ ಬಡ್ತಿ ಯೋಜನೆಗೆ ಪರಿಗಣಿಸಲು ತೀರ್ಮಾನಿಸಿದೆ. ಈ ದಿಶೆಯಲ್ಲಿ ಆದೇಶವನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು.

ಈ) ಕಾಲೇಜು ಶಿಕ್ಷಣ ಇಲಾಖೆಯ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಪಾಸ್ ಕ್ಲಾಸ್ ಮಾಸ್ಟರ್ ಡಿಗ್ರಿ ಉಪನ್ಯಾಸಕರುಗಳೂ ರೀಡರ್ ಹುದ್ದೆಗೆ ಬಡ್ತಿ ಕೊಡಲು ಅನುವಾಗುವಂತೆ ದಿನಾಂಕ ೩ನೇ ಆಗಸ್ಟ್ ೧೯೮೫ರ ಅಧಿಸೂಚನೆ, ಇಡಿ ೧೫೮೮ ಡಿಪಿಇ ೮೫ರಲ್ಲಿ ತಿದ್ದುಪಡಿ ಹೊರಡಿಸಲಾಗಿದೆ. ಈ ಪಾಸ್ ಕ್ಲಾಸ್ ಮಾಸ್ಟರ್ ಡಿಗ್ರಿ ಉಪನ್ಯಾಸಕರೂ ಕೂಡ ಕಾಲಮಿತಿ ಬಡ್ತಿಗೆ ಅರ್ಹರಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈ ಒಂದು ವಿಷಯದ ಬಗ್ಗೆ ಅವರು ಸುಮಾರು ಏಳೆಂಟು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ವಿದ್ಯಾರ್ಜನೆ ಒಂದು ಸಂಪನ್ಮೂಲ ಇದ್ದಹಾಗೆ. ಈ ವಿದ್ಯಾರ್ಜನೆ ಮಾಡತಕ್ಕವರು ಕಳೆದ ೭-೮ ವರ್ಷಗಳಿಂದ ಮಾನಸಿಕವಾಗಿ ವೇದನೆ ಪಡುತ್ತಾ ಇದ್ದರೆ ಅವರು ವಿದ್ಯಾರ್ಜನೆಯನ್ನು ಮಾಡಲಂ ಹೇಗೆ ಸಾಧ್ಯವಾಗುತ್ತದೆ ? ಆದ್ದರಿಂದ ಇವರಿಗೆ ನಿಗಧಿಯಾದ ಕಾಲದಿಂದ ಆ ಆಜ್ಞೆಯನ್ನು ಕೊಟ್ಟರೆ ಅವರ ಮನಸ್ಸಿನಲ್ಲಿ ಆಗಿರತಕ್ಕ ವೇದನೆಯನ್ನು ಬಿಟ್ಟು ಪಾಠ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಇನ್ನೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಾಸ್ ಕ್ಲಾಸ್‌ನಲ್ಲಿ ಉತ್ತೀರ್ಣರಾದವರಿಗೂ ೭-೮ನೇ ಇಸವಿಯವರೆಗೆ ಕೊಡುತ್ತಿದ್ದರು. ಆದರೆ ನಮ್ಮ ಪ್ರೈವೇಟ್ ಕಾಲೇಜ್‌ನಲ್ಲಿ ೨೦೦ ಮಾಸ್ಟರ್ಸ್‌ಗೆ ಮತ್ತು ಗೌರ್ಮೆಂಟ್ ಕಾಲೇಜ್‌ನಲ್ಲಿ ೨೦ ಜನರಿಗೆ ಇನ್ನೂ ಇದನ್ನು ಕೊಟ್ಟಿರುವುದಿಲ್ಲ. ಇದನ್ನು ಇವರಿಗೂ ಕೊಟ್ಟು ಯಾವಾಗಿನಿಂದ ಎಫೆಕ್ಟ್‌ಗೆ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ಚಂದ್ರಶೇಖರ್ ಅವರು ಅರ್ಥ ಮಾಡಿಕೊಳ್ಳಬೇಕು. ಈ ಒಂದು ಯೋಜನೆಯನ್ನು ಭಾರತ ದೇಶದಲ್ಲಿಯೇ ಮೊದಲು ಜಾರಿಗೆ ತಂದಿರತಕ್ಕದ್ದು ನಾವು. ಇವತಂ ಅವರಿಗೆ ಮಾನಸಿಕ ವೇದನೆಯಾಗಿದೆ ಎಂಬುದರಲ್ಲಿ ಯಾವ ಅಂಶವೂ ಅಡಕವಾಗಿಲ್ಲ. ಈ ಯೋಜನೆ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಇವತ್ತು ಯಾರು ೧೫ ವರ್ಷಗಳಿಗೂ ಮೇಲ್ಪಟ್ಟು ಯಾವ ಬಡ್ತಿಯೂ ಇಲ್ಲದೇ ನಿವೃತ್ತಿಯಾಗುತ್ತಾರೆ ಅವರಿಗೆ ಸಹಾಯ ಆಗಲಿ ಎಂದು ನಮ್ಮ ಸರ್ಕಾರ ಇದನ್ನು ಜಾರಿಗೆ ತಂದಿದೆ. ಈ ಬಗ್ಗೆ ಉಪಾಧ್ಯಾಯರು ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸಬೇಕು. ಹಾಗೂ ಮೊನ್ನೇ ತಾನೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ೧೮ ವರ್ಷ ಇದ್ದುದನ್ನು ೧೫ ವರ್ಷಕ್ಕೆ ಇಳಿಸಿದ್ದೇವೆ. ಬೇರೆ ಎರಡು ರಾಜ್ಯಗಳಲ್ಲಿ ಇದು ೧೯-೨೦ ವರ್ಷ ಇದೆ. ೧೫ ವರ್ಷಗಳಿಗೆ ಇಳಿಸಿರುವ ಬಗ್ಗೆ ತೀರ್ಮಾನ ಆಗಿದ್ದು ಇನ್ನು ೧೦ ದಿನಗಳಲ್ಲಿ ಈ ಬಗ್ಗೆ ಸರ್ಕಾರಿ ಆಜ್ಞೆ ಹೊರಡಿಸುವವರಿದ್ದೇವೆ. ಹಾಗೂ ಈಗಾಗಲೇ ಈ ಬಗ್ಗೆ ವಿಶ್ವವಿದ್ಯಾನಿಲಯಕ್ಕೂ ಬರೆದಿದ್ದೇವೆ. ಅವರು ಶಾಸನದ ಪ್ರಕಾರ ಈ ಬಗ್ಗೆ ಸ್ಟ್ಯಾಟ್ಯೂಟ್ ಬದಲಾವಣೆ ಮಾಡಬೇಕಾಗುತ್ತದೆ. ಇನ್ನು ಪ್ರೈವೇಟ್ ಕಾಲೇಜ್‌ಗಳ ಬಗ್ಗೆ ಏನು ಹೇಳಿದ್ದಾರೆ ಆ ಬಗ್ಗೆ ಮಾಹಿತಿ ತರಿಸಿಕೊಂಡು ಪರಿಶೀಲನೆ ಮಾಡಿ ಅವರಿಗೆ ಸಹಾಯ ಮಾಡುತ್ತೇನೆ.

ಶ್ರೀ ಚಂದ್ರಶೇಖರ್.—ಪಾಸ್ ಕ್ಲಾಸ್‌ನಲ್ಲಿ ಆದಂತಹ ಉಪಾಧ್ಯಾಯರಿಗೂ ಇದನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದನ್ನು ಅವರಿಗೆ ಯಾವತ್ತಿನಿಂದ ಕೊಡುತ್ತೀರಿ ? ಹಿಂದೆ ಬೇರೆ ಕಾಲೇಜಿನವರಿಗೆ ಏನಂ ಈ ಸೌಲಭ್ಯವನ್ನು ಕೊಟ್ಟಿದ್ದೀರಿ ಆ ಡೇಟ್‌ನಿಂದಲೇ ಇವರಿಗೂ ಆ ಸೌಲಭ್ಯವನ್ನು ಕೊಡುತ್ತೀರಾ ? ಹಾಗೆ ಕೊಟ್ಟು ಅವರಿಗೆ ಅರಿಯರ್ಸ್ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಯಾವಾಗ ಆಜ್ಞೆ ಜಾರಿಗೆ ಬರುತ್ತದೋ ಆವತ್ತಿನಿಂದ ಅವರಿಗೆ ಆ ಅನುಕೂಲ ಸಿಗುತ್ತದೆ. ಇವತ್ತು ಅವರ ೧೫ ವರ್ಷಗಳ ಸೇವೆಯನ್ನು ಗಣನೆಗೆ ತೆಗೆದುಕೊಳ್ಳುತ್ತೇನೆ. ಅವರು ೧೫ ವರ್ಷಗಳ ಸೇವೆಯನ್ನು ಸಲ್ಲಿಸಿದ್ದರೆ, ಆಜ್ಞೆ ನಾಳೆ ಜಾರಿಗೆ ಬಂದರೆ ನಾಳೆಯಿಂದಲೇ ಅವರಿಗೆ ಆ ಅನುಕೂಲ ಸಿಗುತ್ತದೆ. ಯಾರಿಗೂ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್‌ನ್ನು ಕೊಡುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.